ಕಾವ್ಯಶ್ರೀ, ಶೋರಾಪುರ
ಭಗವಂತನಿಗೂ, ವೈದ್ಯನಿಗೂ ವ್ಯತ್ಯಾಸವೇನು?



ದೇವನ ಬಳಿ ಹೋದವನನ್ನು ವೈದ್ಯ ಕಾಪಾಡಲಾರ. ಕೆಲವು ವೈದ್ಯರ ಬಳಿ ಹೋದವರನ್ನು ದೇವ್ರೇ ಕಾಪಾಡ್ಬೇಕು.

ಜಗದೀಶ ಬಿ. ಹೊಸೂರು, ಮೈಸೂರು
ಪ್ರಕೃತಿಗೆ ವಿರುದ್ಧವಾಗಿ ನಡೆದ ಮನುಜನಿಗೆ ಶಿಕ್ಷೆ ಸರಿ. ತಪ್ಪೇ ಮಾಡದ ಇತರ ಜೀವಿಗಳಿಗೇಕೆ ಶಿಕ್ಷೆ?
ಬೆಂಕಿಗೆ ಜಾಕಾಯಿ, ಶ್ರೀಗಂಧಗಳ ವ್ಯತ್ಯಾಸ ತಿಳಿಯದು.

ಬಿ. ಚಂದ್ರೇಗೌಡ, ಬೆಂಗಳೂರು
ಹೆಂಡತಿ – ಇದು ಪದವೋ, ವಾಕ್ಯವೋ?
ಪದವೇ ಹೊಂದಿಕೊಂಡರೆ ಸಂಪದ; ಹೊಂದದಿದ್ದರೆ ಆಪದ.

ಸುಶೀಲಾ ಎಸ್. ಪಾಟೀಲ, ಸಂಕೇಶ್ವರ
'ಅವಳಿಗೀಗ ನೆಲ ಕಾಣಿಸದು' ಎನ್ನುವುದರ ಅರ್ಥವೇನು?



ನೆಲಕ್ಕೂ ಕಣ್ಣಿಗೂ ಮಧ್ಯೆ ಯಾವಾಗಲೂ ಮೊಬೈಲ್ ಇರುತ್ತದೆಂದು.

ವಿ.ಎಸ್. ಗುರುಶಿವಮೂರ್ತಿ, ಬೆಂಗಳೂರು
ಹಗಲು–ರಾತ್ರಿ ಕ್ರಿಕೆಟ್ ಪಂದ್ಯದಲ್ಲಿ ಬಿಳಿಚೆಂಡಿನ ಬದಲು ಕಪ್ಪು ಚೆಂಡನ್ನು ಬಳಸಿದರೆ ಏನಾಗುತ್ತದೆ?
ಸೆಕೆಂಡ್ ಇನಿಂಗ್ಸ್‌ನಲ್ಲಿ ಸಿಕ್ಸರ್ ಹೊಡೆದ ಚೆಂಡು ಕತ್ತಲಲ್ಲಿ ಸಿಗದಂತಾಗುತ್ತದೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು
ನಾನೊಂದು ರಾಜಕೀಯ ಪಕ್ಷ ಕಟ್ಟಬೇಕೆಂದಿದ್ದೇನೆ. ಹೆಸರು ಸೂಚಿಸುವಿರಾ?
'ಗೋವಿಂದ ಪಕ್ಷ' ಎನ್ನಿ. 'go win' ಎನ್ನುವುದೇ ಧ್ಯೇಯ. ಸೋತರೆ ಗೋವಿಂದ!

ಅನಸೂಯಾ ಟಿ., ಕೇದಿಗೆಮನೆ
ಚಂದ್ರಲೋಕ, ಸೂರ್ಯಲೋಕಕ್ಕೆ ರಾಕೆಟ್ ಕಳಿಸಿದಂತೆ ದೇವಲೋಕ, ಪಿತೃಲೋಕಕ್ಕೆ ಯಾವಾಗ ಕಳಿಸೋದು?
ಈ ಲೋಕಗಳಿಗೆ ತಲುಪದ ರಾಕೆಟ್ಟೆಲ್ಲ ಪ್ಯಾಸೆಂಜರ್ ಸಮೇತ ಆ ಲೋಕಗಳಿಗೇ ಹೋಗಿದ್ದಂತೆ.

ಜಯವಂತ
ನಗೆಗೂ, ಹೊಗೆಗೂ ವ್ಯತ್ಯಾಸವೇನು?
'ಸಲಿಗೆ'. ಸಲಿಗೆ ಇದ್ದಲ್ಲಿ ನಗೆ; ಇಲ್ಲದಲ್ಲಿ ಹೊಗೆ.

ಅಕ್ಷತಾ ಮಂಡಿ ಕುಮಾರ್, ಬೆಂಗಳೂರು
ಬೆಳಗಿನ ತಿಂಡಿ, ಮಧ್ಯಾಹ್ನದ ಭೋಜನ, ರಾತ್ರಿಯ ಊಟ ಪಾಲನೆಗೆ ಬಂದಿದ್ದು ಹೇಗೆ?
'ಸಿಕ್ಕಿಕ್ಕಾಗೆಲ್ಲ ಬಂಡಿಗಟ್ಟೆ ತಿಂದ್ರೆ ಮಾಡ್ವಾಕಕ್ಕಾಗಲ್ಲ ಹೋಗಯ್ಯೋ' ಎಂದು ಹೆಣ್ಣು ಜಬರಿಸಿದಾಗ.

ಮಲ್ಲಿಕಾರ್ಜುನ, ಸುರಧೇನುಪುರ
ದೊಡ್ಡ ಮನೆ ಕಟ್ಟಿ ದೊಡ್ಡವರಾದವರ ಪಟ್ಟಿ ಇದೆಯೆ?
ಇದೆ. ಹತ್ತಿರದ ಪ್ರಮುಖ ಬಿಲ್ಡಿಂಗ್ ಕಂಟ್ರಾಕ್ಟ್ ಅಸೋಸಿಯೇಷನ್ನನ್ನು ಸಂಪರ್ಕಿಸಿ.

ಸುರೇಶ್ ಬಿ.ವಿ. ಬೆಂಗಳೂರು
ಜೈಲಿನಿಂದ ಮಹಿಳಾ ಕೈದಿಗಳೂ ತಪ್ಪಿಸಿಕೊಂಡು ಓಡಿಹೋಗುತ್ತಾರೆಯೇ?
ಬಹಳ ಕಷ್ಟ. ಅವರ ಮೇಲೆ ಯಾರದಾದರೂ ಕಣ್ಣು ಇದ್ದೇ ಇರುತ್ತದಲ್ಲ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಇತ್ತೀಚೆಗೆ ಸ್ನೇಹಿತರಲ್ಲಿ 'ಬ್ರೋ' ಪದವು ಬಳಕೆಯಾಗುತ್ತಿದೆಯಲ್ಲ, ಏನಿದರ ಅರ್ಥ?
'eye'ಗೆ 'brow' ಆಪ್ತವಾದಂತೆಯೇ 'I'ಗೆ 'bro' ಎಂದು!

ಪಿ. ಜಯವಂತ ಪೈ, ಕುಂದಾಪುರ
ಕೇಳುವುದಕ್ಕೂ, ಆಲಿಸುವುದಕ್ಕೂ ವ್ಯತ್ಯಾಸವೇನು?
ಹೆಂಡತಿಯ ಮಾತನ್ನು ಕೇಳುತ್ತೇವೆ; ಪ್ರೇಯಸಿಯ ನುಡಿಯನ್ನು ಆಲಿಸುತ್ತೇವೆ.

## ಬಹುಮಾನಿತ ಪ್ರಶ್ನೆ

ಮಹಾವೀರ ಕಾಸರ, ಶಿವಮೊಗ್ಗ
ವೈದ್ಯರ ಹತ್ತಿರ ಸ್ವಲ್ಪ ಸಮಸ್ಯೆ ಹೇಳಿಕೊಂಡರೆ ಉದ್ದವಾದ ಪ್ರಿಸ್ಕ್ರಿಪ್ಷನ್ ಬರೆದುಕೊಡುವರಲ್ಲ?
ಅದರಿಂದ ಸಿಗುವ ಕಿಕ್‌ಬ್ಯಾಕ್ ಅವರ ಸಮಸ್ಯೆಗೆ ಪರಿಹಾರವಾಗುವುದಂತೆ.

ವಿ. ಹೇಮಂತಕುಮಾರ್, ಬೆಂಗಳೂರು
ತಾಯಿಯ ಜೋಗುಳಕ್ಕೂ, ತಂದೆಯ ಬೈಗುಳಕ್ಕೂ ವ್ಯತ್ಯಾಸವೇನು?
ಮಗು ಮಲಗದಿರುವುದೇ ವ್ಯತ್ಯಾಸ– ಮಲಗಲೆಂದು ಜೋಗುಳ; ಮಲಗಿಲ್ಲವೆಂದು ಬೈಗುಳ.

ಬಿ. ಬಸವರಾಜ್, ಹರಿಹರ
ಅರವತ್ತರ ಆಜೂಬಾಜು ಲಗ್ನವಾಗುವವರಿಗೆ ಮತ್ತು ಅದೇ ವಯಸ್ಸಲ್ಲಿ ವಿಚ್ಛೇದನ ಪಡೆಯುವವರಿಗೆ ನಿಮ್ಮ ಕಿವಿಮಾತು?
ಟ್ಯೂಬು ಟೈರು ಹಳೆಯದಾದಷ್ಟೂ ಮೈಲೇಜ್ ಕಡಿಮೆ; ಟೈರು ಟ್ಯೂಬುಗಳು ಬೇರೆಯಾದರೆ ಜೀವನಚಕ್ರ ಗಡಗಡ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಗಂಡನಿಗೆ ಹೆಂಡತಿ ಮುಖ್ಯವೋ, ತಾಯಿ ಮುಖ್ಯವೋ?



ತಾಯಿಯನ್ನು ಮೆಚ್ಚುವ ಹೆಂಡತಿ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಪ್ರಶ್ನೆಗಳ ಹೊಣೆ ಹೊತ್ತು ಸಾಕಾಗಿದೆ. ಇಳಿಸುವಿರಾ?
ಆಗದು. ನಾವು ಹೋದ ನಂತರವೂ ಪ್ರಶ್ನೆ ಇರುತ್ತದೆ – ವೈದ್ಯರ ಬಿಲ್ ಎಷ್ಟು?

ನರಸಿಂಹ ಪೈ, ಕಾಸರಕೋಡ
ಬೆಳಕನ್ನು ಕಂಡೊಡನೆ ಕತ್ತಲೆ ಓಡುವುದೇಕೆ?
ಅದು 'ತಾಕತ್ತಿದ್ದರೆ ನನ್ನನ್ನು ಹಿಡಿ ನೋಡೋಣ' ಎಂಬ ಕತ್ತಲಿನ ಸವಾಲು.

■ ರಾಮ್